# ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ಆಧುನಿಕ ವಚನಗಳು ಒಂದು ವಿಶ್ಲೇಷಣೆ.

ಡಾ.ಹೊನ್ನಪ್ಪ ಹೊನ್ನಪ್ಪನವರ
ಕನ್ನಡ ಉಪನ್ಯಾಸಕರು
c/o ಎಚ್. ಎಚ್.ದೊಡ್ಡಮನಿ
ಗೌರಿಶಂಕರ ನಗರ
ಅಕ್ಕಮಹಾದೇವಿ ಪಾರ್ಕ್
ಹತ್ತಿರ
ರಾಣೇಬೆನ್ನೂರ ೫೮೧೧೧೫
ಹಾವೇರಿ-ಜಿಲ್ಲೆ
ಮೊ ೯೮೪೪೧೪೧೧೭೪.

ಕವಿ ಕತೆಗಾರ ಸಂತೆಬೆನ್ನೂರು ಫೈಜ್ನಟ್ರಾಜ್ ಕನ್ನಡ ಓದುಗರಿಗೆಲ್ಲಾ ಚಿರಪರಿಚಿತರು. ಇತ್ತೀಚೆಗೆ ಫೈಜ್ ಅವರ ಕತೆ-ಕವಿತೆಗಳು ರಾಜ್ಯ ಮಟ್ಟದ ಪತ್ರಿಕೆಗಳಾದ ಮಯೂರ,ಸುಧಾ,ಕರ್ಮವೀರ ಹಾಗೂ ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿವೆ. ಈಗ ಅವರ ಏಳನೆಯ ಕೃತಿ 'ಆಧುನಿಕ ವಚನಗಳು' ಪ್ರಕಟವಾಗಿ ಓದುಗರ ಕೈಸೇರಿದೆ. ಸೃಜನಶೀಲ ಮನಸ್ಸಿನ ಕವಿ ಫೈಜ್ನಟ್ರಾಜ್ ಮೇಷ್ಟ್ರು ವೃತ್ತಿಯ ಜೊತೆಗೆ ಬರವಣಿಗೆಯನ್ನು ಮೈಗೂಡಿಸಿಕೊಂಡವರು. ಈಗಾಗಲೇ ಮಕ್ಕಳ ಸಾಹಿತ್ಯ, ಕಥೆಗಳು, ಒಲವಿನ ಗೀತೆಗಳಂತಹ ಸಾಹಿತ್ಯ ರಚಿಸಿ ಸೈ ಎನಿಸಿಕೊಂಡಿರುವ ಇವರು ಈಗ ವಚನಗಳ ಮೂಲಕ ನಮ್ಮೆದೆಗೆ ಲಗ್ಗೆಯಿಡುತ್ತಿದ್ದಾರೆ. ವಚನ ಎಂದಾಕ್ಷಣ ನಮ್ಮ ಮನಸ್ಸು ಹನ್ನೆರಡನೇ ಶತಮಾನಕ್ಕೆ ಹೋಗುತ್ತದೆ.ಅರಮನೆಗೆ ಸೀಮಿತವಾಗಿದ್ದ ಸಾಹಿತ್ಯವನ್ನು ಜನರ ಮನೆಗೆ ಮನಸ್ಸಿಗೆ ಹತ್ತಿರವಾಗಿಸಿದ್ದು ಶರಣರು. ಅದಕ್ಕೆ ಕಾರಣ ಅವರು ಬಳಸಿದ ಭಾಷೆ. ಫೈಜ್ ಅವರ 'ಆಧುನಿಕ ವಚನಗಳು' ಅಂತಹದೇ ಸರಳ ಭಾಷೆಯಲ್ಲಿರುವ ಸುಮಾರು ನೂರೈವತ್ತು ವಚನಗಳನ್ನೊಳಗೊಂಡ ವಿಶಿಷ್ಟವಾದ ಕೃತಿ.

ವಚನಗಳ ಒಳ ಹೊಕ್ಕರೆ ಬದುಕು, ಜಾತಿ - ಧರ್ಮಕ್ಕೆ ಸಂಬಂಧಪಟ್ಟ ಮನುಷ್ಯನ ಸಣ್ಣತನಗಳು, ರಾಜಕೀಯ, ಬುದ್ಧ-ಬಸವ, ದೇವರು, ಸತ್ಯ-ಅಸತ್ಯ ಹೀಗೆ ಸಾಲು ಸಾಲು ಸಂಗತಿಗಳು ನಮ್ಮ ಕಣ್ಮನ ಸೆಳೆಯುತ್ತವೆ.

ಕಿರಿದರಲ್ಲಿ ಹಿರಿದರ್ಥ ನೀಡುವ ಶಕ್ತಿ ಇಲ್ಲಿಯ ವಚನಗಳಿಗಿದೆ.

ಎದ್ದೆ ಎನ್ನುವಷ್ಟರಲ್ಲಿ

ಬಿದ್ದೆ ;ಬೀಳಲು ನೀನಾರು

ಒದ್ದೆ ಮನವದು ಸದಾ ದ್ವಂದ್ವ

ಸದ್ದೇ ಇರದೆ ಬಾಳಿದರದೆ

ಬದುಕು ಸಂತೆಪ್ರಿಯ!

ನಾವೆಲ್ಲ ಬದುಕು ಎಂದರೆ ಏನೆಂದು ತಿಳಿದುಕೊಳ್ಳಲು ಎಷ್ಟೆಲ್ಲಾ ಒದ್ದಾಡಿದ್ದೇವೆ. ತಾಸುಗಟ್ಟಲೆ ಭಾಷಣ ಕೇಳಿದ್ದೇವೆ, ಹತ್ತಾರು ಪುಟ ಓದಿದ ನಂತರವೂ ಬದುಕೆಂದರೇನು ಅರ್ಥವಾಗಲಿಲ್ಲ. ಆದರೆ ಬದುಕೆಂದರೆ ಸದ್ದಿಲ್ಲದೆ, ಗದ್ದಲವಿಲ್ಲದೆ, ಕೂಗಾಟ-ಚೀರಾಟ ವಿಲ್ಲದೆ ತೆಪ್ಪಗೆ ಬಾಳಿದರೆ ಸಾಕು ಅದೇ ಬದುಕು ಎನ್ನುವ ಸಂದೇಶವನ್ನು ಈ ಚಿಕ್ಕ ವಚನದಲ್ಲಿ ಈ ಸಂತೆಪ್ರಿಯ ನೀಡುತ್ತಿದ್ದಾನೆ.

ಬರೆ ಬರೆದು ಲೋಕದೆದುರು

ಒರೆಹಚ್ಚಿ ನಿಲಲುಂಟೆ

ಕೊರೆದ ಕೊರಡು ಮತ್ತೆ ಕೊನರಿ ಮೈ

ನೆರೆತುದೆಲ್ಲಿ ;ಖಂಡ ಬಿಡು

ಅಖಂಡವಾಗು ಸಂತೆಪ್ರಿಯ!

ಎಲ್ಲದಕ್ಕೂ ಒರೆಹಚ್ಚಿ ಬದುಕಲು ಇಲ್ಲಿ ಸಮಯವಿಲ್ಲ. ಇಂದಿದ್ದವರು ನಾಳೆ ಇರುತ್ತಾರೆ ಎನ್ನುವ ನಂಬಿಕೆಯಿಲ್ಲ. ಹಾಗಾಗಿ ಒರೆಹಚ್ಚುವ ಬದುಕುಬೇಡ. ಬದುಕನ್ನು ಒಂದು ವ್ರತದಂತೆ ಪರಿಗಣಿಸದೆ ಬದುಕನ್ನು ಆದಷ್ಟು ಸರಳೀಕರಣಗೊಳಿಸಿ ಕೊಡಬೇಕು ಎನ್ನುತ್ತಾನೆ ಕವಿ ಸಂತೆಪ್ರಿಯ.

ಒಬ್ಬನಿಗೆ ಜೈ ಎನಲು ಎಷ್ಟೊಂದು ಕೈ

ಚುನಾವಣೆ ಜಗದ ಹಂಗದು ಹೆಂಗಾದರೂ ಸೈ

ಗೆದ್ದೆತ್ತಿನ ಬಾಲ ಹಿಡಿವ ಜಾಣ ಜನರೈ

ಲೋಕ ಬದಲಾಗದು ನೀ ಬದಲಾಗು

ಅದೇ ಸತ್ಯ ಸಂತೆಪ್ರಿಯ!

ವಿಚಾರವಂತರಿಗೆ ಚುನಾವಣೆಗಳು ಅಸಹ್ಯ ಹುಟ್ಟಿಸುತ್ತಿವೆ. ಕಾಣದ ವೈರಾಣುವೊಂದು ಬಂದು ಹೆಣ ಬೀಳುತ್ತಿರುವಾಗಲೂ ಈ ರಾಜಕಾರಣಿಗಳಿಗೆ ಚುನಾವಣೆಗಳು ಬೇಕು.ಜನರೋ ಜಾತಿ, ಹಣ, ಹೆಂಡಕ್ಕೆ ತಮ್ಮನ್ನು ಮಾರಿಕೊಂಡು ಕೆಟ್ಟ ರಾಜಕಾರಣಿಗಳಿಗೂ ಜೈಕಾರ ಹಾಕುತ್ತಿದ್ದಾರೆ. ಗೆದ್ದೆತ್ತಿನ ಬಾಲ ಹಿಡಿಯುತ್ತಿದ್ದಾರೆ.ಇಂತಹ ವಿಷಮ ಪರಿಸ್ಥಿತಿಯಲ್ಲೂ ಕೂಡಾ ಲೋಕ ಬದಲಾಗದು ನೀನಾದರೂ ಬದಲಾಗು ಎನ್ನುತ್ತಾನೆ ಸಂತೆಪ್ರಿಯ.

ಶಿವನೆಂದರು ಕೆಲರು, ಏಸುವೆಂದರು ಕೆಲರು

ಮಹಮ್ಮದನೊಬ್ಬನೇ ಎಂದರು ಕೆಲರು, ಯಾರು ಏನೆಂದರೇನು

ಬಾನು ಭೂಮಿ ಮಳೆ ಬೆಳೆಯದು ಅಂತೆ ಒಂದೇ

ಬರಿದೇ ಬಡಿದಾಡಿ ಸಾಯುವೆ ಏಕೆಂದ ಸಂತೆಪ್ರಿಯ!

ದೇವರು,ಧರ್ಮ, ಜಾತಿಯ ಹೆಸರಿನಲ್ಲಿ ಹೊಡೆದಾಡಿ ಸಾಯುತ್ತಿರುವ ನಮಗೆಲ್ಲ ಸಂತೆಪ್ರಿಯ ವಾಸ್ತವದೊಂದಿಗೆ ನಮ್ಮನ್ನು ಎಚ್ಚರಿಸುತ್ತಾನೆ.ಮನುಷ್ಯ ಜೀವಿಯೆಲ್ಲಾ ಬದುಕುತ್ತಿರುವುದು ಒಂದೇ ಬಾನಿನ ಕೆಳಗೆ, ಬದುಕುತ್ತಿರುವುದು ಒಂದೆ ಭೂಮಿಯ ಮೇಲೆ, ಸೇವಿಸುತ್ತಿರುವ ಗಾಳಿ, ಕುಡಿಯುತ್ತಿರುವ ನೀರು ಎಲ್ಲವೂ ಒಂದೇ ಆಗಿರುವಾಗ ದೇವರು ಧರ್ಮದ ಹೆಸರಿನಲ್ಲಿ ಹೊಡೆದಾಡಿ ಸಾಯಬೇಡಿ ಎಂದು ವಚನದ ಮೂಲಕವಾಗಿ ಕವಿ ಎಚ್ಚರಿಸುತ್ತಾನೆ.

ಮನ ಮಡಿಯಲ್ಲದೇ

ಮೈ ಮಡಿಯಾದರೇನಣ್ಣ

ನಡೆ ಶುದ್ಧ ಇಲ್ಲದೇ

ನುಡಿ ಹೌದೆಂಬಂತೆ ಇದ್ದರೇನಣ್ಣ

ಒಳಗೊಂದು ಹೊರಗೊಂದು ಇದ್ದು

ಕಿರೀಟ ಹೊತ್ತು ಸಾಗಿದರೆ ಒಳ

ಪರಮಾತ್ಮ ಎಂತೊಲಿವ ಸಂತೆಪ್ರಿಯ

ಮೈ ಮಡಿವಂತಿಕೆಗಿಂತ, ಮನದ ಮಡಿವಂತಿಕೆ ಮುಖ್ಯ. ಡಾಂಭಿಕ ಮಾತುಗಳಿಗಿಂತ ಶುದ್ಧವಾದ ನಡೆ ಮುಖ್ಯ. ಒಳಗೊಂದು ಹೊರಗೊಂದು ಇದ್ದರೆ ಪರಮಾತ್ಮ ಒಪ್ಪುವುದಿಲ್ಲ ಎನ್ನುತ್ತದೆ ಇಲ್ಲಿಯ ವಚನ. ಮಡಿ-ಮೈಲಿಗೆ, ಆಚಾರ-ವಿಚಾರಗಳನ್ನು ಕುರಿತ ಅನೇಕ ವಚನಗಳನ್ನು ಈ ಕೃತಿಯಲ್ಲಿ ಗಮನಿಸಬಹುದು.

ಸತ್ತವರನೆತ್ತಿ ಮಣ್ಣಲಿಡುವರು

ಇದ್ದವರು ಅದೇ ಮಣ್ಣಿಗಾಗಿ ಸಾಯುವರು

ಇದ್ದು ಸಾಯುವ ಬದುಕಿದು

ಸಾಯೋ ಗಳಿಗೆಗೆ ಶುದ್ಧರಾಗದೇ

ಬದುಕಿದರೇನು ಬಂತೇನು ಭಾಗ್ಯ ಸಂತೆಪ್ರಿಯ!

ಪ್ರಸ್ತುತ ಗಳಿಗೆಯಲ್ಲಿ ಮಣ್ಣಲ್ಲಿ ಇಡುವ ಪ್ರಕ್ರಿಯೆ ಜೋರಾಗಿದೆ.ಇಷ್ಟಾದರೂ ಮನುಷ್ಯ ಮಣ್ಣಿನ ಮೇಲಿನ ವ್ಯಾಮೋಹವನ್ನು ಬಿಡುತ್ತಿಲ್ಲ.ಹೆಣ್ಣು,ಹೊನ್ನು, ಮಣ್ಣಿಗಾಗಿ ಹೊಡೆದಾಡಿ ಸಾಯುವವರು ನಮ್ಮ ಮಧ್ಯದಲ್ಲೇ ಅನೇಕರಿದ್ದಾರೆ. ಪಂಪ ಹತ್ತನೆಯ ಶತಮಾನದಲ್ಲೇ ರಾಜ್ಯಲಕ್ಷ್ಮಿಯ ಬಗೆಗೆ ಹೇಳುತ್ತಾ "ಸೋದರರೊಳ್ ಸೋದರರಂ ಕಾದಿಸುವುದು" ಎನ್ನುತ್ತಾನೆ.ಮನುಷ್ಯ ಅಳಿದ ಮೇಲೂ ಉಳಿಯುವುದು ಅವನ ಆಸ್ತಿ- ಅಂತಸ್ತಲ್ಲ ಅವನ ವ್ಯಕ್ತಿತ್ವ. ಹಾಗಾಗಿ ಇಲ್ಲಿ ಕವಿ ಸಾಯೋ ಗಳಿಗೆಯಲ್ಲಾದರೂ ಶುದ್ಧರಾಗಬೇಕು, ಶುದ್ಧರಾಗದೆ ಹೋದರೆ ಬದುಕಿಗೆ ಅರ್ಥವಿಲ್ಲವೆನ್ನುತ್ತಾನೆ ಕವಿ.

ಸಂಬಂಧಗಳ ಬಗೆಗೆ ಕವಿ ಹೇಳುವ ಮಾತುಗಳು ತುಂಬಾ ಅರ್ಥಪೂರ್ಣವಾಗಿವಾಗಿವೆ,

ಸಂಬಂಧಗಳು

ಬಿಸಿಮುದ್ದೆ ಮ್ಯಾಗ ಸುರಿದ ತುಪ್ಪ

ಸರ್ರಂತ ಕರಗೋ ಮುಂಚೆ

ಲಟ್ಟಂತ ತುತ್ ಮಾಡಿ

ಉಂಡ್ ಬಿಡಬೇಕು

ಇಲ್ಲಾಂದ್ರೆ

ಸೆಟಗೊಂಟ್ ಬಿಡ್ತಾವೆ ಸಂತೆಪ್ರಿಯ!

 ISSN : 2583-2948

ಆಧುನಿಕ ಬದುಕಿನಲ್ಲಿ ಸಂಬಂಧಗಳು ಗೋಜಲುಮಯವಾಗಿವೆ. ಇಂತಹ ಸಂದರ್ಭದಲ್ಲಿ ಸಂಬಂಧಗಳು ಕರಗಿ(ಕಳೆದು) ಹೋಗುವ ಮುಂಚೆಯೇ ಅವುಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು ಎನ್ನುವ ಸಂದೇಶವನ್ನು ಸಂತೆಪ್ರಿಯ ಈ ವಚನದ ಮೂಲಕ ನೀಡುತ್ತಿದ್ದಾನೆ.

ಒಟ್ಟಾರೆಯಾಗಿ ಇಲ್ಲಿಯ ವಚನಗಳಲ್ಲಿ ಸರಳತೆಯಿದೆ, ಸೌಂದರ್ಯವಿದೆ ಹಾಗೂ ರಸಾನಂದವಿದೆ. ಅನೇಕ ವಾಸ್ತವ ಸಂಗತಿಗಳೊಂದಿಗೆ ಇಲ್ಲಿಯ ವಚನಗಳು ಜನರನ್ನು ಚಿಂತನೆಗೆ ಹಚ್ಚುತ್ತವೆ, ಜಾಗೃತಗೊಳಿಸುತ್ತವೆ. ಫೈಜ್ನಟ್ರಾಜ್ ತಮ್ಮ ಸಾಹಿತ್ಯದ ಮೂಲಕ ನಮ್ಮೆಲ್ಲರ ಪ್ರತಿನಿಧಿಯಾಗಿ ಸಮಾಜವನ್ನು ಎಚ್ಚರಿಸುವಂತಹ ಕಾಯಕವನ್ನು ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅವರ ಆಧುನಿಕ ವಚನಗಳು ಎಂಬ ಕೃತಿಗೆ ಅಗ್ರಸ್ಥಾನ ಎಂದು ಹೇಳಿದರೆ ತಪ್ಪಾಗಲಾರದು. ಒಳ್ಳೆಯ ರಸವತ್ತಾದ ಕೃತಿಗಳನ್ನು ಸದಾ ಓದುಗರಿಗೆ ನೀಡುತ್ತ ಬಂದಿರುವ ಸಂತೆಬೆನ್ನೂರು ಫೈಜ್ನಟ್ರಾಜ್ ಅವರು ಇನ್ನೂ ಹೆಚ್ಚಿನ ಕೃತಿಗಳನ್ನು ರಚಿಸಲಿ ಎಂದು ಆಶಿಸೋಣ..